# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು – 570 006

ಪ್ರವೇಶಾತಿ ವಿಭಾಗ

---

ಸಂಖ್ಯೆ: ಕರಾಮುವಿ/ಪ್ರವಿ/ಎಡಿಎಂ-1/ 150/ 2025-26 ದಿನಾಂಕ: 19.09.2025

**ಸುತ್ತೋಲೆ:**

ವಿಷಯ: ಯುಜಿಸಿಯ ಸಾರ್ವಜನಿಕ ತಿಳುವಳಿಕೆ ಪತ್ರದನ್ವಯ 2025-26ರ ಜುಲೈ ಆವೃತ್ತಿಯಿಂದ ಆರೋಗ್ಯ ಸೇವೆ ಮತ್ತು ಸಂಬಂಧಿತ ವಿಭಾಗಗಳ ಕೋರ್ಸುಗಳು ಹಾಗೂ ವಿಶೇಷತೆಯ ಕಾರ್ಯಕ್ರಮಗಳನ್ನು ODL & OL ಮಾದರಿಯಲ್ಲಿನ ಪ್ರವೇಶಾತಿಯನ್ನು ರದ್ದುಪಡಿಸಿರುವ ಬಗೆಗೆ:

ಉಲ್ಲೇಖ:1. ವಿವಿ ಪ್ರವೇಶಾತಿ ಅಧಿಸೂಚನೆ ಸಂಖ್ಯೆ: ಕರಾಮುವಿ/ಪ್ರವಿ/ಎಡಿಎಂ-1/143/2025-26, ದಿನಾಂಕ:25.06.2025

2. ಯುಜಿಸಿಯ ಸಾರ್ವಜನಿಕ ತಿಳುವಳಿಕೆ ಪತ್ರ ಸಂಖ್ಯೆ: F.No:4-1/2025 (DEB-NER) Dated: 12.08.2025
3. ದಿನಾಂಕ:18.08.2025ರಂದು ನಡೆದ ಶೈಕ್ಷಣಿಕ ಮಂಡಳಿಯ 36ನೇ ವಿಶೇಷ ಸಭೆಯ ತೀರ್ಮಾನ
4. ಯುಜಿಸಿ-ಡಿಇಬಿ ಪೋರ್ಟಲ್‌ನಲ್ಲಿ ಮಾನ್ಯತೆ ಕುರಿತು ಪ್ರಕಟಿಸಿರುವ ಪಟ್ಟಿ
5. ವಿವಿಯ ಆದೇಶ ಸಂಖ್ಯೆ: ಕರಾಮುವಿ/ ಡೀನ್(ಶೈ)/04/80903/ 2018-19, ದಿನಾಂಕ:16.09.2025
6. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 19.09.2025

******

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು 2025-26ರ ಜುಲೈ ಆವೃತ್ತಿಯಲ್ಲಿ ಯುಜಿಸಿ ಅನುಮೋದಿತ ಪದವಿ ಹಾಗೂ ಸ್ನಾತಕೋತ್ತರ ಪದವಿ ಶೈಕ್ಷಣಿಕ ಕಾರ್ಯಕ್ರಮಗಳ ಜೊತೆಗೆ ಪಿಜಿ ಸರ್ಟಿಫಿಕೇಟ್ / ಯುಜಿ ಡಿಪ್ಲೋಮಾ/ಸರ್ಟಿಫಿಕೇಟ್ ಕಾರ್ಯಕ್ರಮಗಳ ಪ್ರವೇಶಾತಿಗೆ ಉಲ್ಲೇಖ(1)ರ ಅಧಿಸೂಚನೆ ಹೊರಡಿಸುವ ಮೂಲಕ ದಿನಾಂಕ:01.09.2025ರಿಂದ ಪ್ರವೇಶಾತಿ ಪ್ರಾರಂಭಿಸಲಾಗಿರುತ್ತದೆ.

ಯುಜಿಸಿಯು ದಿನಾಂಕ: 12.08.2025ರಂದು ಹೊರಡಿಸಿರುವ ತನ್ನ ಸಾರ್ವಜನಿಕ ತಿಳುವಳಿಕೆ ಪತ್ರದಲ್ಲಿ NCAHP Act 2021 ಗೆ ಒಳಪಡುವ ವಿಷಯಗಳ ಶೈಕ್ಷಣಿಕ ಕಾರ್ಯಕ್ರಮಗಳನ್ನು ODL & OL ಮಾದರಿಯಲ್ಲಿ ನಡೆಸದಂತೆ ದೇಶಾದ್ಯಂತ ಇರುವ ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಸ್ಪಷ್ಟ ಸೂಚನೆ ನೀಡಿರುತ್ತದೆ. ಮುಂದುವರೆದು, ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ಮಾನ್ಯತೆ ಪಡೆದಿರುವ ಶೈಕ್ಷಣಿಕ ಕಾರ್ಯಕ್ರಮಗಳ ಪಟ್ಟಿಯಿಂದ ಬಯೋ ಕೆಮಿಸ್ಟ್ರಿ ವಿಷಯವನ್ನೂ ಸಹ ಕೈಬಿಟ್ಟಿರುತ್ತದೆ. ಅದರಡಿ **1**. Psychology, **2**. Microbiology, **3**.Food & Nutrition Science, **4**.Bio Technology, **5**.Clinical Nutrition & Dietetics & 6. Bio Chemistry ವಿಷಯಗಳಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳನ್ನು ನಡೆಸದಂತೆ ನಿರ್ಬಂಧಿಸಲಾದ ಹಿನ್ನೆಲೆಯಲ್ಲಿ ದಿನಾಂಕ: 18.08.2025 ರಂದು ನಡೆದ ಶೈಕ್ಷಣಿಕ ಮಂಡಳಿಯ ತೀರ್ಮಾನದಂತೆ ಶೈಕ್ಷಣಿಕ ವಿಭಾಗವು ಉಲ್ಲೇಖ(4)ರ ಕಚೇರಿ ಆದೇಶವನ್ನು ಹೊರಡಿಸುವ ಮೂಲಕ ಕೆಳಕಂಡ ಕೋರ್ಸುಗಳ ಪ್ರವೇಶಾತಿಯನ್ನು 2025-26ರ ಜುಲೈ

ಆವೃತ್ತಿಯ ಪ್ರವೇಶಾತಿಯಿಂದಲೇ ನಿರ್ಬಂಧಿಸುವ ಮೂಲಕ ಸ್ಥಗಿತಗೊಳಿಸಿ ಅನುಸರಿಸಬೇಕಾದ ಕ್ರಮಗಳ ಕುರಿತು ಸೂಚನೆಗಳನ್ನು ನೀಡಿರುತ್ತದೆ.

| Sl No | Name of the programmes & Courses/Subject |
|---|---|
| 1 | M.Sc. in Psychology |
| 2 | M.Sc. in Microbiology |
| 3 | M.Sc. in Food & Nutrition Science |
| 4 | M.Sc. in Bio Technology |
| 5 | M.Sc. in Clinical Nutrition & Dietetics |
| 6 | M.Sc. in Bio Chemistry |
| 7 | B.Sc. (General) - (Combination: BcBMi, CBMi, BcMiFs, CMiEs, & BcMiEs,, BcBZ, BcZEs, & BcBEs ) |
| 8 | B.A. (Opted Psychology as one of the Optional Subject out of three) |
| 9 | PG Certificate Program in Nutrition & Dietetics |
| 10 | UG Diploma in Nutrition & Health Education |
| 11 | UG Certificate in Nutrition & Food |
| 12 | i) Open Elective for UG Programmes (BCA, BBA, B.Sc. – General, B.Sc. - (IT), BSW) : Food Science & Nutrition, Microbiology, |
| | ii) Open Elective for PG Programmes (MA, M.Com., M.Sc., MBA, MCA, MSW) : Bio Chemistry, Bio Technology, Clinical Nutrition & Dietetics, Micro Biology, Psychology, & Food Science & Nutrition. |

ನಿರ್ಬಂಧಿತ ಕೋರ್ಸುಗಳು ಮತ್ತು ಸಂಬಂಧಿತ ವಿಷಯಗಳ ಕುರಿತು ಶೈಕ್ಷಣಿಕ ವಿಭಾಗವು ಹೊರಡಿಸಿರುವ ಕಚೇರಿ ಆದೇಶದಲ್ಲಿನ ಸೂಚನೆಗಳನ್ನೊಳಗೊಂಡು ಮುಂದುವರೆದಂತೆ ಕೆಳಕಂಡ ಕ್ರಮಗಳನ್ನು ಅನುಸರಿಸುವುದು;

**ವಿದ್ಯಾರ್ಥಿಗಳು ಕೂಡಲೇ ತಾವು ಪ್ರವೇಶ ಪಡೆದಿರುವ ಪ್ರಾದೇಶಿಕ ಕೇಂದ್ರಗಳಿಗೆ / ಕೇಂದ್ರ ಕಚೇರಿ ಮೈಸೂರಿಗೆ ಪೂರ್ಣ ದಾಖಲಾತಿಗಳೊಂದಿಗೆ ಕಡ್ಡಾಯವಾಗಿ ಭೇಟಿ ನೀಡಿ, ಕೋರ್ಸು ಬದಲಾವಣೆಗೆ ಕ್ರಮವಹಿಸುವುದು.**

<u>ಪ್ರಾದೇಶಿಕ ನಿರ್ದೇಶಕರುಗಳುಗಳಿಗೆ ಸೂಚನೆ:</u>

1. ಈಗಾಗಲೇ ಮೇಲಿನ ಕೋರ್ಸುಗಳಿಗೆ ಪ್ರವೇಶಾತಿ ಹೊಂದಿದ್ದಲ್ಲಿ ಅಂತಹ ವಿದ್ಯಾರ್ಥಿಗೆ ಬಯಸುವ ಇತರೆ ಕೋರ್ಸುಗಳಿಗೆ (ವಿದ್ಯಾರ್ಹತೆಯ ಷರತ್ತಿಗೆ ಒಳಪಟ್ಟು) ಪ್ರವೇಶ ಪಡೆಯಲು ಮಾರ್ಗದರ್ಶನ ನೀಡಿ ಕೋರ್ಸು ಬದಲಾವಣೆ ಮಾಡಿಕೊಳ್ಳುವ ಕೋರ್ಸುಗಳಿಗೆ ಪ್ರವೇಶಾತಿ ನೀಡುವುದು.
2. ಅದೇ ರೀತಿ ಬಿ.ಎಸ್ಸಿ – ಜನರಲ್ ಕಾರ್ಯಕ್ರಮಕ್ಕೆ ಪ್ರವೇಶ ಪಡೆದು ಮೇಲಿನ ಕಾಂಬಿನೇಷನ್ಸ್ ತೆಗೆದುಕೊಂಡಿದ್ದಲ್ಲಿ ವಿದ್ಯಾರ್ಥಿ ಬಯಸುವ ಇತರೆ ಕಾಂಬಿನೇಷನ್ಸ್‌ಗಳಿಗೆ (ವಿದ್ಯಾರ್ಹತೆಯ ಷರತ್ತಿಗೆ ಒಳಪಟ್ಟು) ಬದಲಾವಣೆ ಮಾಡಿಕೊಳ್ಳಲು ಅವಕಾಶ ನೀಡಿ, ಪರಿಷ್ಕರಿಸುವುದು.
3. ಅದೇ ರೀತಿ ಬಿ.ಎ. ಕಾರ್ಯಕ್ರಮದಲ್ಲಿ ಐಚ್ಛಿಕ ವಿಷಯವಾಗಿ ಮನೋವಿಜ್ಞಾನ (ಸೈಕಾಲಜಿ) ವಿಷಯವನ್ನು ಆಯ್ಕೆ ಮಾಡಿಕೊಂಡಿದ್ದಲ್ಲಿ ವಿದ್ಯಾರ್ಥಿ ಬಯಸುವ ಇತರೆ ಲಭ್ಯ ಐಚ್ಛಿಕ ವಿಷಯಕ್ಕೆ ಬದಲಾವಣೆ ಮಾಡಿಕೊಳ್ಳಲು ಅವಕಾಶ ನೀಡಿ, ಪರಿಷ್ಕರಿಸುವುದು.
4. ಹಾಗೆಯೇ, ಯುಜಿ/ಪಿಜಿ ಕೋರ್ಸುಗಳಲ್ಲಿ ಮುಕ್ತ ಆಯ್ಕೆಯಾಗಿ ಆಯ್ಕೆ ಮಾಡಿಕೊಂಡಿದ್ದಲ್ಲಿ ವಿದ್ಯಾರ್ಥಿ ಬಯಸುವ ಇತರೆ ಲಭ್ಯ ಓಪನ್ ಎಲೆಕ್ಟಿವ್ ವಿಷಯಕ್ಕೆ ಬದಲಾವಣೆ ಮಾಡಿಕೊಳ್ಳಲು ಅವಕಾಶ ನೀಡಿ, ಪರಿಷ್ಕರಿಸುವುದು.

5. ಮೇಲಿನ ಎಲ್ಲಾ ಪ್ರಕರಣಗಳಲ್ಲಿ ವಿದ್ಯಾರ್ಥಿಯು ಈಗಾಗಲೇ ಅಧ್ಯಯನ ಸಾಮಗ್ರಿಗಳನ್ನು ಪಡೆದಿದ್ದಲ್ಲಿ ವಾಪಸ್ಸು ಪಡೆದು ಹೊಸದಾಗಿ ಪ್ರವೇಶ ಪಡೆಯುವ ಕೋರ್ಸಿನ ಸಿದ್ಧಪಾಠ ವಿತರಿಸುವುದು.

6 ಈ ಎಲ್ಲಾ ಸೂಚನೆಗಳು ಉಲ್ಲೇಖ(4)ರ ಆದೇಶದ ಮುಂದುವರೆದ ಭಾಗವಾಗಿದ್ದು, ಸದರಿ ಆದೇಶದಲ್ಲಿನ ಸೂಚನೆಗಳನ್ವಯ ಕ್ರಮವಹಿಸುವುದು.

7. ಕೋರ್ಸು / ವಿಷಯ ಬದಲಾವಣೆಯನ್ನು ಶುಲ್ಕ ರಹಿತವಾಗಿ ಕ್ರಮವಹಿಸುವುದು.

ಪ್ರಸ್ತುತ ಪ್ರವೇಶ – ಪರೀಕ್ಷೆಯ End to End ಪ್ರಕ್ರಿಯೆಯನ್ನು ಆನ್‌ಲೈನ್ ಮೂಲಕ ನಿರ್ವಹಣೆ ಮಾಡುತ್ತಿರುವ ಇನ್‌ಹಾಕ್ ಐಟಿ ಸಲ್ಯೂಷನ್ಸ್ ಪ್ರೈ ಲಿ, ಬೆಂಗಳೂರು ಇವರು ಈ ಬಗ್ಗೆ ಪ್ರವೇಶಾತಿ ಪ್ರಕ್ರಿಯೆ ಸಾಫ್ಟ್‌ವೇರ್‌ನಲ್ಲಿ ಅಗತ್ಯ ಬದಲಾವಣೆ ಮಾಡುವ ಮೂಲಕ ಅವಕಾಶ ಕಲ್ಪಿಸುವುದು. ವಿದ್ಯಾರ್ಥಿಗಳಿಗೆ ಸೂಕ್ತ ಸಂದೇಶ (ಎಸ್‌ಎಂ.ಎಸ್/ ವಾಟ್ಸ್‌ಆಪ್ ಗ್ರೂಪ್ ಸಂದೇಶ...... ಇತರೆ ಲಭ್ಯ ಮೋಡ್‌ಗಳಲ್ಲಿ) ಗಳನ್ನು ಕಳುಹಿಸಿ, ಬದಲಾವಣೆ ಮಾಡಿ, ಪ್ರವೇಶಾತಿಯ ಅಂತಿಮ ದಿನಾಂಕದೊಳಗೆ ಸಂಪೂರ್ಣ ಪ್ರಕ್ರಿಯೆಗಳನ್ನು ಕಡ್ಡಾಯವಾಗಿ ಪೂರ್ಣಗೊಳಿಸುವುದು.

ಈ ಪ್ರಕ್ರಿಯೆಯಲ್ಲಿ ಸಂದೇಹಗಳು ಬಂದಲ್ಲಿ ಪ್ರವೇಶಾತಿ ವಿಭಾಗ/ ಶ್ರೀ ವಿಜಯ್ ಶೆಣೈ/ಲೇಖನ ಸಾಮಗ್ರಿ ವಿಭಾಗಗಳನ್ನು ಸಂಪರ್ಕಿಸಿ ಕ್ರಮವಹಿಸುವುದು.

| | | | |
|---|---|---|---|
| 1 | ಪ್ರವೇಶಾತಿ ವಿಚಾರವಾಗಿ | : | ಶ್ರೀಮತಿ ಹೆಚ್.ಆರ್.ಸುಮ – 9945366062, ಶ್ರೀ ಶ್ರೀಧರ್ – 9972888888, ಶ್ರೀ ಬಿ.ಆರ್.ಕೃಷ್ಣ – 9686576399, ಶ್ರೀ ಪಿ.ಎಸ್. ಪ್ರಸನ್ನ 9035395137, ಶ್ರೀ ಮುರಳಿಧರ್ – 8123469017, ಶ್ರೀ ಎಲ್.ಜೆ. ರಘು –9611418726, ಶ್ರೀ ಎಂ.ವಿ.ನಂದೀಶ್ – 9844010407 |
| 2 | ತಾಂತ್ರಿಕ ವಿಚಾರವಾಗಿ | : | ಶ್ರೀ ತೇಜಸ್ – 7795599654, ಮತ್ತು ಶ್ರೀ ವಿಜಯ್ ಶೆಣೈ – 9986889528 |
| 3 | ಅಧ್ಯಯನ ಸಾಮಗ್ರಿಗಳ ವಿಚಾರವಾಗಿ: | : | ಶ್ರೀ ತಿಮ್ಮಯ್ಯ – 9743591909, ಶ್ರೀಮತಿ ಎಂ.ಹೆಚ್.ಕೋಮಲ – 9480034176 ಮತ್ತು ಶ್ರೀಮತಿ ನಳಿನಿ ಜಯರಾಂ – 9916231813 |

ಇವರುಗಳನ್ನು ಸಂಪರ್ಕಿಸಬಹುದಾಗಿದೆ.

ಆದೇಶದ ಮೇರೆಗೆ,

ಕುಲಸಚಿವ

ಗೆ:

1. ಸಂಬಂಧಪಟ್ಟ ಎಲ್ಲಾ ವಿದ್ಯಾರ್ಥಿಗಳ ಗಮನಕ್ಕೆ – ಇವರಿಗೆ ಅಧಿಕೃತ ಅಂತರ್ಜಾಲದಲ್ಲಿ ಪ್ರಕಟಿಸುವ ಮೂಲಕ ಗಮನಕ್ಕೆ ತರಲಾಗಿದೆ.
   ವಿದ್ಯಾರ್ಥಿಗಳು ಕೂಡಲೇ ತಾವು ಪ್ರವೇಶ ಪಡೆದಿರುವ ಪ್ರಾದೇಶಿಕ ಕೇಂದ್ರಗಳಿಗೆ / ಕೇಂದ್ರ ಕಚೇರಿ ಮೈಸೂರಿಗೆ ಪೂರ್ಣ ದಾಖಲಾತಿಗಳೊಂದಿಗೆ ಕಡ್ಡಾಯವಾಗಿ ಭೇಟಿ ನೀಡಿ, ಕೋರ್ಸು ಬದಲಾವಣೆಗೆ ಕ್ರಮವಹಿಸುವುದು.
2. ನಿರ್ದೇಶಕರು, ಪ್ರವೇಶಾತಿ ವಿಭಾಗ, ಕರಾಮುವಿ, ಮೈಸೂರು.

3. ಪ್ರಾದೇಶಿಕ ನಿರ್ದೇಶಕರು, ಕರಾಮುವಿ ಪ್ರಾದೇಶಿಕ ಕೇಂದ್ರಗಳು – ಇ ಮೇಲ್ ಮೂಲಕ.
4. ಉಪಕುಲಸಚಿವರು, ಅಧ್ಯಯನ ಸಾಮಗ್ರಿ ವಿಭಾಗ, ಕರಾಮುವಿ, ಮೈಸೂರು.
5. ಇನ್‌ಹಾಕ್ ಐಟಿ ಸಲ್ಯೂಷನ್ಸ್ ಪ್ರತಿನಿಧಿಗಳು , ಪ್ರವೇಶಾತಿ ಸಾಫ್ಟ್‌ವೇರ್‌ನಲ್ಲಿ ಸೂಕ್ತ ತಿದ್ದುಪಡಿ ಮಾಡುವುದು ಮತ್ತು ವಿದ್ಯಾರ್ಥಿಗಳಿಗೆ ಎಸ್‌ಎಂಎಸ್ ಕಳುಹಿಸಿ ಮಾಹಿತಿ ಪಡೆದು ಪ್ರಕ್ರಿಯೆ ಪೂರ್ಣಗೊಳಿಸುವುದು.

ಪ್ರತಿ:

1. ಎಲ್ಲಾ ಶಾಸನಬದ್ಧ ಅಧಿಕಾರಿಗಳು, ಕರಾಮುವಿ, ಮೈಸೂರು.
2. ಡೀನ್(ಅಧ್ಯಯನ ಕೇಂದ್ರಗಳು), ಕರಾಮುವಿ, ಮೈಸೂರು.
3. ವಿಜ್ಞಾನ ವಿಷಯಗಳ ನಿಕಾಯದ ನಿರ್ದೇಶಕರು, ಕರಾಮುವಿ, ಮೈಸೂರು.
4. ಎಲ್ಲಾ ಅಧ್ಯಯನ ವಿಭಾಗಗಳ ಮುಖ್ಯಸ್ಥರು, ಕರಾಮುವಿ - – ಮೇಲ್ ಮೂಲಕ
5. ಎಲ್ಲಾ ನಿರ್ದೇಶಕರುಗಳು / ವಿಶೇಷಾಧಿಕಾರಿಗಳು / ಸಂಯೋಜನಾಧಿಕಾರಿಗಳು/ವಿದ್ಯಾರ್ಥಿ ಕ್ಷೇಮಪಾಲನಾ ಅಧಿಕಾರಿಗಳು - ಕರಾಮುವಿಯಲ್ಲಿನ ವಿವಿಧ ವಿಭಾಗಗಳು. – ಮೇಲ್ ಮೂಲಕ.
6. ನಿರ್ದೇಶಕರು-ಐಟಿ, ಕರಾಮುವಿ, ಮೈಸೂರು.
7. ಎಲ್ಲಾ ಉಪಕುಲಸಚಿವರು / ಸಹಾಯಕ ಕುಲಸಚಿವರು ಕರಾಮುವಿಯಲ್ಲಿನ ವಿವಿಧ ವಿಭಾಗಗಳು. – ಮೇಲ್ ಮೂಲಕ.
8. ಸಂಯೋಜನಾಧಿಕಾರಿಗಳು, ವಿದ್ಯಾರ್ಥಿ ವೇತನ ಘಟಕ, ಕರಾಮುವಿ - – ಮೇಲ್ ಮೂಲಕ
9. ಡಾ:ಸಿ.ಜಿ.ನವೀನ್ ಕುಮಾರ್, ಸಂಯೋಜನಾಧಿಕಾರಿಗಳು, ವಿವಿ ಅಂತರ್ಜಾಲ ನಿರ್ವಹಣೆ, ಕರಾಮುವಿ - ಇವರಿಗೆ ದಿನಾಂಕ:16.09.2025ರಂದು ಹೊರಡಿಸಿರುವ ಉಲ್ಲೇಖ(4)ರ ಆದೇಶ ಹಾಗೂ ಈ ಸುತ್ತೋಲೆಯನ್ನು ವಿವಿಯ ಅಧಿಕೃತ ಅಂತರ್ಜಾಲದಲ್ಲಿ ಹಾಗೂ KSOU Digital Academic Platform App ನಲ್ಲಿ ತುರ್ತಾಗಿ ಅಪ್‌ಲೋಡ್ ಮಾಡುವುದು.
10. ವಿಶೇಷಾಧಿಕಾರಿಗಳು, ಮಾನ್ಯ ಕುಲಪತಿಗಳ ಆಪ್ತಶಾಖೆ, ಕರಾಮುವಿ, ಮೈಸೂರು.
11. ಎಲ್ಲಾ ಅಧೀಕ್ಷಕರು / ಕಾರ್ಯನಿರ್ವಾಹಕರು, ಪ್ರವೇಶಾತಿ ವಿಭಾಗ, ಕರಾಮುವಿ, ಮೈಸೂರು.
12. ವಿವಿ ನಿಲಯದ ಸೂಚನಾ ಫಲಕಗಳು / ಮಾಹಿತಿ ಮತ್ತು ಮಾರ್ಗದರ್ಶಕ ಘಟಕ, ಪ್ರವೇಶಾತಿ ವಿಭಾಗ, ಕರಾಮುವಿ.
13. ಕಚೇರಿ ಪ್ರತಿ.
14. ರಕ್ಷಾ ಕಡತ